## ಕಳೆದ ಸಂಚಿಕೆಯಲ್ಲಿ



ಮಫತ್ಲಾಲ್ ಗುನ್ನಾಲಾಲ್ ಮುಂಬಯಿಯ ಮಲ್ಬಾರ್ ಹಿಲ್ಸ್‌ನ ನಂಬರ್ ಒನ್ ಶ್ರೀಮಂತರಲ್ಲೊಬ್ಬ. ಹದಿನೆಂಟರ ವಯಸ್ಸಿನಲ್ಲಿ ಪುಟ್ಟ ಹಳ್ಳಿಯಿಂದ ಮನೆ ಬಿಟ್ಟು ಮುಂಬಯಿಗೆ ಬಂದಿದ್ದ ಗುನ್ನಾಲಾಲ್, ತನಗೇ ಅಚ್ಚರಿ ಎನ್ನಿಸುವಷ್ಟರ ಮಟ್ಟಿಗೆ ಬೆಳೆದಿದ್ದ. ಟೆಕ್ಸ್‌ಟೈಲ್ಸ್ ಇಂಡಸ್ಟ್ರಿಯ ಆಳ ಅಗಲಗಳನ್ನು ಬಲ್ಲವನಾಗಿದ್ದ. ಗುನ್ನಾಲಾಲ್‌ಗೆ ಮೊಮ್ಮಗ ಆಸ್ಕರ್ ವೈಲ್ಡ್‌ನನ್ನು ಕಂಡರೆ ಇನ್ನಿಲ್ಲದ ಪ್ರೀತಿ. ಮೊಮ್ಮಗ ಹುಟ್ಟಿದ ಕೂಡಲೇ ಕೈಸೇರಿದ ಇನ್ನೂರು ಕೇಜಿ ಚಿನ್ನದಿಂದಾಗಿ, ಕೂಸನ್ನು ಸೋನಾಲಾಲ್ ಎಂದು ಕರೆಯಲಾಗಿತ್ತು. ಆ ಸೋನಾಲಾಲ್‌ಗೆ ಆಸ್ಕರ್ ವೈಲ್ಡ್ ಎನ್ನುವ ಹೆಸರು ಬರಲು ಕಾರಣ ಒಂದು ಕನಸು. ತಾತ ಹಾಗೂ ಮೊಮ್ಮಗನಿಗೆ ಏಕಕಾಲದಲ್ಲಿ ಬಿದ್ದ ಒಂದೇ ಕನಸು ಈ ಹೆಸರು ಬದಲಾವಣೆಗೆ ಕಾರಣವಾಗಿತ್ತು. ಮೊಮ್ಮಗನಿಗೆ ತನ್ನ ಚಕ್ರಾಧಿಪತ್ಯವನ್ನು ವಹಿಸಿಕೊಡಬೇಕೆನ್ನುವುದು ಗುನ್ನಾಲಾಲ್ ಕನಸು. ಅಜ್ಜನ ಕನಸನ್ನು ನನಸು ಮಾಡಬೇಕಾದ ಮೊಮ್ಮಗ ಡ್ರಗ್ಸ್ ಪೆಡ್ಲಿಂಗ್ ಕೇಸ್‌ನಲ್ಲಿ ಸಿಕ್ಕಿಕೊಂಡು ಪೊಲೀಸ್ ಠಾಣೆಯಲ್ಲಿ ಕೂತಿದ್ದ.

ಆದೇಶವಾಗುತ್ತದೆ. ಅಲ್ಲದೆ ಹುಡುಗಿಯೊಬ್ಬಳನ್ನು ಹಿಪ್ನಟೈಸ್ ಮಾಡಿ ಮನಸ್ಸನ್ನು ಹಾಳು ಮಾಡಿದ ಕಾರಣಕ್ಕಾಗಿ ಕಪೂರ್‌ಗೆ ಮೂರು ದಿನ ಪೊಲೀಸರು ಆತಿಥ್ಯ ನೀಡುತ್ತಾರೆ. ಈ ವೇಳೆಗಾಗಲೇ ಕಪೂರನ ಅಕೌಂಟಿನಲ್ಲಿ ಇಪ್ಪತ್ತೊಂದು ಲಕ್ಷ ರೂಪಾಯಿಗಳಿದ್ದವು. ಯಾವುದಾದರೊಂದು ಬಿಸಿನೆಸ್ ಮಾಡುವ ಉದ್ದೇಶ ಹುಟ್ಟಿಕೊಂಡರೂ ಕಡಗೆ ಮನಸ್ಸು ಬದಲಾಯಿಸಿಕೊಂಡು ಬಿಎಸ್ಸಿ ಸೇರಿಕೊಂಡು, ಎಂಎಸ್ಸಿಯನ್ನೂ ಮುಗಿಸಿಕೊಂಡು ಫಸ್ಟ್ ಗ್ರೇಡ್ ಕಾಲೇಜಿನಲ್ಲಿ ಮ್ಯಾಥಮೆಟಿಕ್ಸ್ ಲೆಕ್ಚರರ್ ಆದ.

ಎಂಥ ಕಠಿಣವಾದ ಲೆಕ್ಕಗಳನ್ನೂ ವಿದ್ಯಾರ್ಥಿಗಳಿಗೆ ಅರ್ಥವಾಗುವಂತೆ ಸರಳ ರೀತಿಯಲ್ಲಿ ಪಾಠ ಮಾಡುತ್ತಿದ್ದ. ಗಣಿತಕ್ಕೂ ಮೆದುಳಿಗೂ ಎಂಥದ್ದೋ ವಿಚಿತ್ರ ಸಂಬಂಧ ಇರುವುದನ್ನು ಕಂಡುಕೊಂಡ. ಹಾಗಾಗಿ ಮಿಡ್ ಬ್ರೈನ್ ಆಕ್ಟಿವೇಷನ್ ಟ್ಯುಟೋರಿಯಲ್ ಸ್ಥಾಪಿಸಿದ. ಅಂಥ ಒಂದು ದಿನ ತನಗೆ ತೊಂದರೆ ಕೊಟ್ಟಿದ್ದ ಹಿಂದಿನ ಮಹಾ ನಗರಪಾಲಿಕೆಯ ಕಮಿಷನರ್ ಇನ್‌ಸ್ಟಿಟ್ಯೂಟ್‌ನಲ್ಲಿ ಪ್ರತ್ಯಕ್ಷವಾಗಿ, ತನ್ನನ್ನು ಕ್ಷಮಿಸಿ ತನ್ನ ಮಗಳನ್ನು ಮದುವೆ ಮಾಡಿಕೊಳ್ಳಬೇಕೆಂದು ವಾದಿರಾಮ್ ಕಪೂರನನ್ನು ಕೈಹಿಡಿದು ಕೇಳಿಕೊಂಡಿದ್ದ. ಕಪೂರ್ ಮಹಾ ನಗರಪಾಲಿಕೆಯ ಹಿರಿಯ ಅಧಿಕಾರಿ ಶಿವಾಜಿ ಠಾಕೂರ್ ಪಟೇಲನ ಮಿಡ್ ಬ್ರೈನನ್ನು ಕುಳಿತಲ್ಲಿಂದಲೇ ಟ್ವಿಸ್ಟ್ ಮಾಡಿದ್ದ. ಅಂಥ ಕಪೂರನಿಗೆ ಬಾಲಕ ಮಿಡ್ ಬ್ರೈನ್ ಬಗ್ಗೆ ಪ್ರಶ್ನೆ ಎಸೆದಿದ್ದ.

ಕಪೂರ್ ಕೂಡಲೇ, 'ಕಂದ, ಮೆದುಳೆಂಬುದು ಜಗತ್ತಿನಲ್ಲಿ ಅತ್ಯಂತ ಕ್ಲಿಷ್ಟವಾದ ಮತ್ತು ಸಂಕೀರ್ಣವಾದ ವಸ್ತು. ಇಡೀ ಶರೀರಕ್ಕೆ ಪ್ರತಿಯೊಂದು ಸಂದೇಶವನ್ನು ಕಳಿಸುವುದು ಈ ಮಿಡ್ ಬ್ರೈನೇ. ಕಣ್ಣು ಮತ್ತು ಕಿವಿಗಳಿಗೆ ಅಲ್ಲದೆ ಶರೀರದ ಪ್ರತಿಯೊಂದು ಅಂಗಗಳಿಗೂ ಮೆಸೇಜ್ ಕ್ಷಣಮಾತ್ರದಲ್ಲಿ ರವಾನಿಸುತ್ತದೆ. ಇದು ನರಮಂಡಲದ ಕೇಂದ್ರ. ನಿದ್ದೆ ಮತ್ತು ಎಚ್ಚರಗಳ ನಿಯಂತ್ರಣ ಕೂಡ ಈ ಮಿಡ್ ಬ್ರೈನ್ ಮಾಡುತ್ತದೆ. ಕರುಳಿನ ಮೂಲಕ ಉತ್ಪಾದನೆಯಾಗುವ ಹಸಿವು ಮತ್ತು ಕಾಮಗಳನ್ನಷ್ಟೇ ಅಲ್ಲದೆ ದ್ವೇಷ, ಮತ್ಸರ, ಸ್ವಾರ್ಥ ಮುಂತಾದ **natural instinct**ಗಳನ್ನು ಹುಟ್ಟಿ ಹಾಕಿ ಸ್ಟಿಮ್ಯುಲೇಟ್ ಮಾಡುವುದು ಮಿಡ್ ಬ್ರೈನೇ. ಒಟ್ಟಾರೆ ಮನುಷ್ಯನ ಸಂಪೂರ್ಣ ಚಲನಶೀಲತೆಯನ್ನು ಕಂಟ್ರೋಲ್ ಮಾಡೋದು ಮಿಡ್ ಬ್ರೈನ್. ಸೋ ಅದನ್ನು ಅತ್ಯಂತ ಸೂಕ್ಷ್ಮ ನೆಲೆಗಳಲ್ಲಿ ಜಾಗೃತಗೊಳಿಸುವಂಥ ಕೆಲಸ ಮಾಡಲು ನಾವು ಮ್ಯಾಥಮೆಟಿಕ್ಸ್‌ನ ಮೊರೆ ಹೋಗಬೇಕಾಗುತ್ತದೆ...'

ವಾದಿರಾಮ್ ಕಪೂರನ ಮಾತುಗಳನ್ನು ಮಧ್ಯದಲ್ಲಿಯೇ ತುಂಡರಿಸಿ ಸೋನಾಲಾಲನು 'ಐಯ್ಯಾಮ್ ಸಾರಿ ಸರ್' ಎಂದು ಬಾಯ್ಮುಚ್ಚಿ ಕಿವಿ ತೆರೆದಿದ್ದ. ಸೋನಾಲಾಲ್ ತಾತ ಗುನ್ನಾಲಾಲನ ಕೈಹಿಡಿದು ನೊಬೆಲ್ ಪ್ರಶಸ್ತಿ ವಿಜೇತರ ಬಗ್ಗೆ ಹೇಳಿದಾಗ ವಾದಿರಾಮ್ ಕಪೂರ್ ಸಹಜವಾಗಿ ನೆನಪಾಗಿದ್ದ. ಗುನ್ನಾಲಾಲ್ ನೊಬೆಲ್ ಪ್ರೈಜ್‌ಗಳು ಹುಟ್ಟಿದ ಇತಿಹಾಸವನ್ನು ಮೊಮ್ಮಗ ಸೋನಾಲಾಲನಿಗೆ ತಿಳಿಸಿದ್ದ: 'ನೋಡು ಸೋನಾ, ಜಗತ್ತಿನ ಇತಿಹಾಸದಲ್ಲಿ ಅತ್ಯಂತ ಕೆಟ್ಟವರೂ ಸಹ ಅತ್ಯಂತ ಒಳ್ಳೆಯವರೂ, ಗುಣವಂತರೂ ಆಗಿ ಬದಲಾವಣೆಗೊಂಡ ಅನೇಕ ಉದಾಹರಣೆಗಳು ಇವೆ. ಈ ನೊಬೆಲ್ ಕೂಡಾ ಅಂಥವರಲ್ಲಿ ಒಬ್ಬ. ಆಲ್ಫ್ರೆಡ್ ನೊಬೆಲ್ ಒಬ್ಬ ಕೈಗಾರಿಕೋದ್ಯಮಿ, ವಿಜ್ಞಾನಿ, ಎಂಜಿನಿಯರ್ ಮತ್ತು ಸಂಶೋಧಕ. ಅವನು ಕವಿ ಮತ್ತು ನಾಟಕಕಾರ ಸಹ ಆಗಿರುತ್ತಾನೆ. ಅವರಪ್ಪನ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ನೊಬೆಲ್ ಡೈನಮೈಟ್ ಕಂಡುಹಿಡಿಯುತ್ತಾನೆ. ಡೈನಮೈಟ್ ಸ್ಫೋಟಗೊಂಡು ಅವನ ಸ್ವಂತ ತಮ್ಮನೇ ಸಾವಿಗೀಡಾಗುತ್ತಾನೆ. ಹಾಗಾಗಿ ಅವನನ್ನು ಸಾವಿನ ವ್ಯಾಪಾರಿ ಎಂದೇ ಕರೆಯಲಾಗುತ್ತದೆ. ಕಡೆಗೆ ಅವನಿಗೆ ಜ್ಞಾನೋದಯವಾಗುತ್ತದೆ. ಸಮಾಜಕ್ಕೆ ಗುಣಾತ್ಮಕ ಅಂಶಗಳನ್ನು ನೀಡುವ ಸಂಶೋಧನೆಗಳ ಕಡೆ ಗಮನಹರಿಸುವನಲ್ಲದೆ ಎಲ್ಲಾ ಕ್ಷೇತ್ರಗಳಲ್ಲೂ ಅಂಥ ಸಂಶೋಧಕರನ್ನು ಉತ್ತೇಜಿಸುತ್ತಾನೆ. ವಿಜ್ಞಾನ, ಸಾಹಿತ್ಯ, ಅರ್ಥಶಾಸ್ತ್ರ ಮುಂತಾದ ಕ್ಷೇತ್ರಗಳಲ್ಲಿ ಅತ್ಯುನ್ನತ ಸಾಧನೆ ಮಾಡಿದವರಿಗಾಗಿ ಅವನ ಹೆಸರಲ್ಲಿ ನೊಬೆಲ್ ಪ್ರಶಸ್ತಿಯನ್ನು ನೀಡುತ್ತಾ ಬರಲಾಗಿದೆ'. ತಾತ ಗುನ್ನಾಲಾಲನ ಮಾತುಗಳು ಸೋನಾಲಾಲನ ಮನದಲ್ಲಿ ಬಲವಾಗಿ ನಾಟಿದ್ದವು.

ಸೋನಾಲಾಲ್ ಎರಡನೆಯ ಪಿಯುಸಿಯಲ್ಲಿ ಓದುತ್ತಿದ್ದ. ಮಿಡ್ ಟರ್ಮ್ ಪರೀಕ್ಷೆ ಮುಗಿದಿತ್ತು. ಹದಿನೈದು ದಿನಗಳ ರಜವೂ ಮುಗಿದಿತ್ತು. ರಜೆಯ ಕೊನೆಯ ದಿನ ತಾತನೊಂದಿಗೆ ಮುಂಬಾದೇವಿಯ ದೇವಸ್ಥಾನಕ್ಕೆ ಹೋಗಿ ವಿಶೇಷ ಪೂಜೆಯನ್ನು ಮುಗಿಸಿ ಬಂದು ಊಟ ಮಾಡಿ ಮಲಗಿದ್ದ. ರಾತ್ರಿಯ ಯಾವುದೋ ಗಳಿಗೆಯಲ್ಲಿ ಆ ಕನಸು ಅರಳಿತ್ತು. ಅದೇ ಟೈಮಿನಲ್ಲಿ ಸೇಮ್ ಟು ಸೇಮ್ ಅದೇ ಕನಸು ಮಫತ್ಲಾಲ್ ಗುನ್ನಾಲಾಲನಿಗೂ ಬಿದ್ದಿತ್ತೆಂದರೆ! ಓ ಮೈ ಗಾಡ್! ಕನಸು ಹೀಗಿತ್ತು: ಅದು ಸೋನಾಲಾಲನ ಹುಟ್ಟುಹಬ್ಬದ ಕಾರ್ಯಕ್ರಮ. ಕಾರ್ಯಕ್ರಮದಲ್ಲಿ ಹಾಲು ಹುಣ್ಣಿಮೆಯ ಬೆಳದಿಂಗಳಿನಂತಿದ್ದ ಸುಂದರ ಹುಡುಗಿಯೊಬ್ಬಳು ಸ್ಟೇಜಿನ ಮೇಲೆ ನೃತ್ಯ ಮಾಡುತ್ತಿದ್ದಾಳೆ. ಅಂಥ ಸುಂದರಿಯನ್ನು ಸೋನಾಲಾಲ್ ಹಿಂದೆಂದೂ ನೋಡಿರಲಿಲ್ಲ. ಯಾರಿಗೂ ಮನಸೋಲದ ಸೋನಾಲಾಲ್ ನೃತ್ಯ ಮಾಡುತ್ತಿರುವ ಹುಡುಗಿಗೆ ಆ ಕ್ಷಣವೇ ಹೃದಯ ಮನಸ್ಸುಗಳೆರಡನ್ನೂ ಕೊಟ್ಟು ಖಾಲಿಯಾಗಿಬಿಡುತ್ತಾನೆ. ಸ್ಟೇಜಿನ ಒಂದು ಕೊನೆಯಿಂದ ಮತ್ತೊಂದು ಕಡೆಗೆ ತಂಗಾಳಿಯಂತೆ ತೇಲುತ್ತಾ ಅವಳು ನೃತ್ಯದಲ್ಲಿ ತೊಡಗಿದ್ದರೆ, ಅವಳ ಕಾಲ್ಗೆಜ್ಜೆಯ ಸದ್ದಿನಲ್ಲಿ ತಾನು ಸಿಲುಕಿ ಕರಗಿದಂತೆ ಅನುಭವವಾಗುತ್ತದೆ ಸೋನಾಲಾಲನಿಗೆ. ಅವಳೊಂದಿಗೆ ತಾನೂ ನೃತ್ಯ ಮಾಡಬೇಕೆನಿಸುತ್ತದೆ ಅವನಿಗೆ. ಕೂಡಲೇ ಎದ್ದು ಸ್ಟೇಜಿನ ಮೇಲೆ ನಡೆಯುತ್ತಾನೆ. ತನ್ನ ಕುಟುಂಬ ಸದಸ್ಯರು, ಸ್ನೇಹಿತರು, ಬಂಧು ಬಳಗ, ತಮ್ಮ ಕೈಗಾರಿಕೆಯಲ್ಲಿ ಕೆಲಸ ಮಾಡುವ ನೌಕರರು, ತನ್ನ ಶಾಲೆಯ ಟೀಚರ್‌ಗಳು... ಹೀಗೆ ನೂರಾರು ಮಂದಿ ಸ್ಟೇಜಿನ ಮೇಲೆ ಸೋನಾಲಾಲನನ್ನು ನೋಡಿ ಕರತಾಡನ ಮಾಡುತ್ತಾರೆ. ಸೋನಾಲಾಲ್ ನೃತ್ಯ ಮಾಡುತ್ತಿದ್ದ ಹುಡುಗಿಗೆ ನೃತ್ಯ ನಿಲ್ಲಿಸಲು ಹೇಳುತ್ತಾನೆ.

'ಯಾರು ನೀನು, ನನ್ನ ನೃತ್ಯವನ್ನು ಏಕೆ ನಿಲ್ಲಿಸಿದೆ...?' ಸಿಡಿಮಿಡಿಗೊಂಡಂತೆ ಕೇಳುತ್ತಾಳೆ ಹುಡುಗಿ. ಸಿಟ್ಟಿನಿಂದ ಕೆಂಪಡರಿದ ಅವಳ ಮುಖದ ಸೌಂದರ್ಯ ಇಮ್ಮಡಿಗೊಂಡು ಸೋನಾಲಾಲ್ ಅವಳಿಗೆ ಮತ್ತಷ್ಟು ಸೋಲುತ್ತಾನೆ. 'ನಾನು ಸೋನಾ.., ಸೋನಾಲಾಲ್. ನನ್ನ ಹುಟ್ಟುಹಬ್ಬದ ಪ್ರಯುಕ್ತ ನೀನಿಲ್ಲಿ ನೃತ್ಯ ಮಾಡುತ್ತಿರುವೆ...' ಅವಳ ಬಳಿ ಸಾರಿ ಕಿವಿಯಲ್ಲಿ ಉಸುರುತ್ತಾನೆ.

'ಸೋ ವ್ಹಾಟ್, ನೃತ್ಯ ನನ್ನ ಕಾಯಕ. ಡ್ಯಾನ್ಸ್ ಮಾಡಲೆಂದೇ ನಾನು ಹುಟ್ಟಿರುವುದು. ಹೀಗೆ ನಾನು ಡ್ಯಾನ್ಸ್ ಮಾಡುತ್ತಲೇ ಇರುತ್ತೇನೆ...' ಕಿಲಕಿಲ ನಗುತ್ತಾಳೆ ಹುಡುಗಿ. ಪಳ್ಳನೆ ಹೊಳೆಯುತ್ತವೆ